

ಹೋಟೆಲ್‌ಗೆ ಬಂದ ವಿವಿಧ ದೇಶಗಳ ಪ್ರವಾಸಿಗರು ಕಾಣಿಕೆಯಾಗಿ ಕೊಟ್ಟ ಕರೆನ್ಸಿ ನೋಟ್‌ಗಳು!

ಇಸ್ರೇಲಿನ ಮರುಭೂಮಿಯನ್ನು ಸೀಳಿ ಸಾಗುತ್ತಿದ್ದ ವಾಹನದಿಂದ ಹೊರ ನೋಡಿದಾಗ, 'ಡೆಡ್ ಸೀ' ತಲುಪಲು ಇನ್ನೂ ಎರಡು ತಾಸು ಎಂಬುದು ಗೊತ್ತಾಯಿತು. ವ್ಯಾನಿನಲ್ಲಿದ್ದ ಡಿಜಿಟಲ್ ಥರ್ಮಾಮೀಟರ್ ಹೊರಗಿನ ತಾಪಮಾನ 45 ಡಿ.ಸೆಂ. ಎಂದು ತೋರಿಸುತ್ತಿತ್ತು. ಹೊಟ್ಟೆಯ ಚುರುಗುಟ್ಟುವಿಕೆಯೂ ಹೆಚ್ಚುತ್ತಿತ್ತು. ಮರಳುಗಾಡಿನ ಮಧ್ಯೆ ದೂರದಲ್ಲಿ ಹಸಿರು ತುಣುಕನ್ನು ತೋರಿಸುತ್ತ ಮಾರ್ಗದರ್ಶಕ ನತಾಂಜಾನ್ ರಾನ್ 'ಈಗ ಮಧ್ಯಾಹ್ನದ ಊಟ ಅಲ್ಲೇ' ಎಂದು ಹೇಳಿದರು. ಮುಂದಿನ ಮೂರ್ನಾಲ್ಕು ನಿಮಿಷಗಳಲ್ಲಿ ಅಲ್ಲಿದ್ದೆವು. ಸುತ್ತಲೂ ಆಲಿವ್ ಮರಗಳು; ಮಧ್ಯೆ ರೆಸ್ಟೋರೆಂಟ್!

ಬಗೆಬಗೆಯ ಸೊಪ್ಪು–ತರಕಾರಿ, ಹಣ್ಣು, ಬ್ರೆಡ್, ಮೊಸರು ಹಾಗೂ ಎರಡು ತುತ್ತು ಸಾಮರ್ಥ್ಯದ ಬಟ್ಟಲಿನಲ್ಲಿ ಅನ್ನ – ಇದು ನಮ್ಮ 'ಲಂಚ್'. ಊಟ ಮಾಡುತ್ತಿದ್ದಾಗ 'ಪ್ಯಾರ್ ಹುವಾ ಇಕರಾರ್ ಹುವಾ ಹೈ' ಹಾಡು ಮೆಲುದನಿಯಲ್ಲಿ ಕೇಳಿ ರೋಮಾಂಚನ ಆಯಿತು. "ಭಾರತೀಯರು ಬಂದಾಗ ಹಿಂದಿ ಸಿನಿಮಾದ ಹಾಡುಗಳನ್ನು ಹಾಕುವುದು ಇಲ್ಲಿ ಸಹಜ" ಎಂದರು ರಾನ್. ಅದೇ ಖುಷಿಯಲ್ಲಿ ಊಟ ಮಾಡುತ್ತಿದ್ದಾಗ ಎರಡನೇ ಹಾಡಿನ ಕೊನೆಕೊನೆಗೆ ರಾಗ ತಪ್ಪಿ, ಅಳಲು ಶುರುವಾದಂತಾಯಿತು. ಸರ್ವ್ ಮಾಡುತ್ತಿದ್ದ ಮಾಲೀಕ ಅನೊವ್ ಪಾತ್ರೆಯನ್ನು ಅಲ್ಲೇ ಬಿಟ್ಟು, ದಡಬಡಿಸಿ ಎದ್ದುಹೋದ. ಕೆಲಕ್ಷಣಗಳಲ್ಲಿ ಅಳು ಸಹಜ ಸ್ಥಿತಿಯ ಹಾಡಾಗಿ ಪರಿವರ್ತನೆಯಾಯಿತು! ಏನೋ ಸಂಶಯದಿಂದ ಅಲ್ಲಿಗೆ ಹೋಗಿ ನೋಡಿದಾಗ ಕಂಡಿದ್ದು – ಎಚ್‌ಎಂವಿ ಗ್ರಾಮಾಫೋನ್!

ಇಸ್ರೇಲಿನ ಪೂರ್ವದ 'ಡೆಡ್ ಸೀ' (ಮೃತ ಸಮುದ್ರ) ತಾಣ ಸಂಪರ್ಕಿಸುವ ಹೆದ್ದಾರಿಗೆ ಅನತಿ ದೂರದಲ್ಲಿ ಆರು ಕೊಠಡಿಗಳ 'ಬೊಕೆರೊ' ಎಂಬ ಹೆಸರಿನ ಹೋಟೆಲ್ ಇದೆ. ಟ್ರಾವೆಲ್ ಅಥವಾ ಪ್ರವಾಸಿ ವೆಬ್‌ಸೈಟ್‌ಗಳ ದೃಷ್ಟಿಯಿಂದ ಇದು ಪ್ರವಾಸಿಗರಿಗೆ ಅಷ್ಟೇನೂ ಪರಿಚಿತವಲ್ಲ. ಆದರೂ ಇಲ್ಲಿಗೆ ಬರುವ ಪ್ರವಾಸಿಗರ ಸಂಖ್ಯೆ ಸಾಕಷ್ಟು ಇದೆಯಂತೆ. ಇದರ ಮಾಲೀಕ, 65 ವರ್ಷ ವಯಸ್ಸಿನ ಅನೊವ್, ರೆಸ್ಟೋರೆಂಟ್ ಮಾತ್ರ ನಡೆಸುವುದಿಲ್ಲ. ಇದಕ್ಕೆ ಹೊಂದಿಕೊಂಡೇ ಅವರ ಎರಡೂವರೆ ಎಕರೆ ಕಿತ್ತಳೆ ತೋಟವಿದೆ. ಇಲ್ಲಿ ಬೆಳೆಯುವ ಕಿತ್ತಳೆಯನ್ನು ಸಂಸ್ಕರಣಾ ಘಟಕದಲ್ಲಿ ವ್ಯವಸ್ಥಿತವಾಗಿ ಪ್ಯಾಕ್ ಮಾಡಿ, ಯೂರೋಪ್ ರಾಷ್ಟ್ರಗಳಿಗೆ ಕಳಿಸುತ್ತಾರೆ.

'ಈ ಮರುಭೂಮಿಯಲ್ಲಿ ತೋಟ ಮಾಡುವುದೆಂದರೆ ಎಷ್ಟು ಕಷ್ಟ, ಗೊತ್ತಲ್ಲ? ಆದರೆ ಕೃಷಿ ಸಂಶೋಧನಾ ಕೇಂದ್ರಗಳು ಹಾಗೂ ಸರ್ಕಾರಗಳ ನೆರವಿನಿಂದ ಈ ಹಂತ ತಲುಪಲು ಸಾಧ್ಯವಾಯಿತು' ಎಂದು ತಮ್ಮ ಪ್ರಯತ್ನದ ವಿವರ ಬಿಚ್ಚಿಟ್ಟರು ಅನೊವ್. ಅವರ ಕೃಷಿ ಕೆಲಸಗಳಿಗೆ ಹೆಚ್ಚು ಸಹಕಾರ ಕೊಡುವುದು ಪತ್ನಿ ಹಾಗೂ ಮಗ.

ತೋಟದ ಜತೆಗೆ ಹೋಟೆಲ್ ನಡೆಸುವ ಅನೊವ್, ಎಚ್‌ಎಂವಿ ಕಂಪನಿಯ ಗ್ರಾಮಾಫೋನ್ ಇಟ್ಟುಕೊಂಡಿದ್ದಾರೆ; ಜೊತೆಗೆ ಹಿಂದಿ ಚಿತ್ರದ ಹಾಡುಗಳ ತಟ್ಟೆಗಳನ್ನೂ! ರಾಜ್‌ಕಪೂರ್ ಹಾಗೂ ಸುನಿಲ್ ದತ್ ಚಿತ್ರದ ಹಲವು ಡಿಸ್ಕ್‌ಗಳು ಅಲ್ಲಿದ್ದವು. ಐದು ಸಾವಿರ ಕಿಲೋಮೀಟರ್ ದೂರದ ಇಸ್ರೇಲಿಗೆ ಭಾರತೀಯರು ಬಂದು, ಈ ಹೋಟೆಲಿನಲ್ಲಿ ಊಟ ಮಾಡುವಾಗ ಹಿಂದಿ ಸಿನಿಮಾ ಹಾಡುಗಳನ್ನು ಮಾಲಿಕ ಅನೊವ್ ತಪ್ಪದೇ ಹಾಕುತ್ತಾರಂತೆ. ಅಂದಹಾಗೆ ಇದು ಹ್ಯಾಂಡಲ್ ಮೂಲಕ ತಿರುಗಿಸಿದಾಗ ಹಾಡುವ ಗ್ರಾಮಾಫೋನ್! 'ಶಕ್ತಿ ಕಡಿಮೆಯಾಗುತ್ತಲೇ ಹಾಡು ಬೇರೆ ಥರ ಕೇಳಿಸುತ್ತದೆ. ಆಗ ಎಲ್ಲಿದ್ದರೂ ಓಡಿ ಬಂದು ಮತ್ತೆ ಹ್ಯಾಂಡಲ್ ತಿರುಗಿಸುತ್ತೇನೆ' ಎಂದು ಹೇಳಿ ನಕ್ಕರು ಅನೊವ್.

ಈ ಗ್ರಾಮಾಫೋನ್ ಹಿಂದೆ ಹಲವು ಕರೆನ್ಸಿ ನೋಟುಗಳು ಕಾಣಿಸಿದಾಗ ಮತ್ತಷ್ಟು ಕುತೂಹಲ ಮೂಡಿತು. ಅದೂ ಒಂದೆರಡಲ್ಲ, ಹತ್ತಾರು ದೇಶಗಳ ನೋಟುಗಳು! 'ಇಲ್ಲಿಗೆ ಬರುವವರ ಕಡೆಯಿಂದ ಮೊದಲೆಲ್ಲ ಅವರ ದೇಶದ ನೋಟುಗಳನ್ನು ಪಡೆದು ಇಲ್ಲಿ ಬೋರ್ಡಿನಲ್ಲಿ ಅಂಟಿಸುತ್ತಿದ್ದೆ. ಆಮೇಲೆ ಇಲ್ಲಿಗೆ ಊಟ–ವಾಸ್ತವ್ಯಕ್ಕೆಂದು ಬಂದವರು ವಾಪಸು ಹೋಗುವಾಗ ಪ್ರೀತಿಯಿಂದ ತಮ್ಮ ದೇಶದ ಕರೆನ್ಸಿ ಕೊಡಲು ಶುರು ಮಾಡಿದರು. ಕೆಲವರು ನೋಟಿನ ಮೇಲೆ ತಮ್ಮ ಹಾಗೂ ದೇಶದ ಹೆಸರು ಬರೆದುಕೊಡುತ್ತಾರೆ. ಅವುಗಳೂ ಇಲ್ಲಿವೆ' ಎನ್ನುತ್ತ ಅನೊವ್, 'ಭಾರತದ ಪ್ರವಾಸಿಯೊಬ್ಬರು ಕೊಟ್ಟಿದ್ದ ನೋಟು ಇಲ್ಲಿದೆ ನೋಡಿ' ಎಂದು ಹತ್ತು ರೂಪಾಯಿ ಹಿಡಿದು ತೋರಿಸಿದರು.

ಅದೇ ಖುಷಿಯಲ್ಲಿ ನಾವು ಆರು ಜನರು ಒಂದೊಂದು ನೋಟನ್ನು ಅನೊವ್‌ಗೆ ಕೊಡುಗೆಯಾಗಿ ಕೊಟ್ಟೆವು. ಅವರು ಅದಕ್ಕೆ ಪ್ರತಿಯಾಗಿ ಒಂದೊಂದು ಕಿತ್ತಳೆ ನೀಡಿದರು. ಆ ಕಿತ್ತಳೆಯೂ ಅವರ ಪ್ರೀತಿಯಷ್ಟೇ ಸಿಹಿಯಾಗಿತ್ತು.